

ಅರಸೊತ್ತಿಗೆ ಹಾಗೂ ಪ್ರಜಾಪ್ರಭುತ್ವದ ಹೊಂದಾಣಿಕೆಯ ನಡಿಗೆಯಂತೆ ಕಾಣಿಸುವ 'ಮೈಸೂರು ದಸರಾ'ದ ಆಚೆಗೂ ಮಹಾನವಮಿಯ ಬೇರುಗಳು ನಾಡಿನುದ್ದಗಲಕ್ಕೂ ಹರಡಿಕೊಂಡಿವೆ. ಆಶಯದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲವಾದರೂ, ಆಚರಣೆಯ ವಿಧಾನಗಳಲ್ಲಿ ದಸರೆ ಬಹುರೂಪಿ. ಭಾರತದ ಬಹುತ್ವ ಹಾಗೂ ಹಲವು ಕನ್ನಡಂಗಳ ಅಭಿವ್ಯಕ್ತಿಯ ರೂಪದಲ್ಲಿ ಮಹಾನವಮಿಯನ್ನು ನೋಡಬಹುದು. ಪ್ರದೇಶದಿಂದ ಪ್ರದೇಶಕ್ಕೆ, ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗುವ ದಸರೆಯ ಆಚರಣೆಗಳಲ್ಲಿ, ಪ್ರಕೃತಿಯ ವೈವಿಧ್ಯ ಹಾಗೂ ಜೀವಂತಿಕೆಯನ್ನು ಜನಜೀವನದಲ್ಲೂ ತರುವ ಉದ್ದೇಶವಿದೆ. 'ಬನ್ನಿ ಹಬ್ಬ'ದ ಬಹುರೂಪವನ್ನು ಚಿತ್ರಿಸುವ ಈ ವಿಶೇಷ ಬರಹ, ನಾಡಿನ ಸಾಂಸ್ಕೃತಿಕ ವೈವಿಧ್ಯವನ್ನು, ಕನ್ನಡ ಸಂಸ್ಕೃತಿಯ ಪ್ರಜಾಸತ್ತಾತ್ಮಕ ಚಹರೆಗಳನ್ನೂ ಗುರ್ತಿಸುವ ಪ್ರಯತ್ನವಾಗಿದೆ.

■ ಅರುಣ್ ಜೋಳದಕೂಡ್ಲಿಗಿ